ಕರ್ನಾಟಕ ವಿಧಾನ ಸಭೆ
ಹದಿನಾಲ್ಕನೇ ವಿಧಾನಸಭೆ
ಒಂಭತ್ತನೇ ಅಧಿವೇಶನ

# ಶ್ರೀ ಮಲ್ಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2016

**(2016ರ ವಿಧಾನಸಭೆಯ ವಿಧೇಯಕ ಸಂಖ್ಯೆ – 07)**

**(ವಿಧಾನ ಸಭೆಯಿಂದ ಅಂಗೀಕಾರವಾದ ರೂಪದಲ್ಲಿ ಮತ್ತು ವಿಧಾನ ಪರಿಷತ್ತಿನಲ್ಲಿ ತಿದ್ದುಪಡಿಯೊಂದಿಗೆ ಅಂಗೀಕಾರವಾದ ರೂಪದಲ್ಲಿರುವ ಮತ್ತು ಪುನರ್ ಪರ್ಯಾಲೋಚನೆಗಾಗಿ)**

ಶ್ರೀ ಮಲ್ಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಶ್ರೀ ಮಲ್ಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013ನ್ನು (2013ರ ಕರ್ನಾಟಕ ಅಧಿನಿಯಮ, 37) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ:

ಇದು, ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಶ್ರೀ ಮಲ್ಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 19ನೇ ಪ್ರಕರಣದ ತಿದ್ದುಪಡಿ.-** ಶ್ರೀ ಮಲ್ಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013ರ (2013ರ ಕರ್ನಾಟಕ ಅಧಿನಿಯಮ 37) 19ನೇ ಪ್ರಕರಣದಲ್ಲಿ,-

(i) (2)ನೇ ಉಪಪ್ರಕರಣದಲ್ಲಿ, "ರಾಜ್ಯ ಸರ್ಕಾರವು, ಮಾರ್ಪಾಟುಗಳ ಸಹಿತವಾಗಿ ಅಥವಾ ಯಾವುವೇ ಮಾರ್ಪಾಟುಗಳಿಲ್ಲದೆ ಯೋಜನೆಯನ್ನು ಅನುಮೋದಿಸಬಹುದು." ಎಂಬ ಪದಗಳನ್ನು ಪೂರ್ಣವಿರಾಮ ಚಿಹ್ನೆಯೊಂದಿಗೆ ಬಿಟ್ಟುಬಿಡತಕ್ಕದ್ದು.

(ii) (3)ನೇ ಉಪಪ್ರಕರಣದಲ್ಲಿ, "(2)ನೇ ಉಪ-ಪ್ರಕರಣದ ಅಡಿಯಲ್ಲಿ ಅಭಿವೃದ್ಧಿ ಯೋಜನೆಯನ್ನು ಅನುಮೋದಿಸಿದ ತರುವಾಯ," ಎಂಬ ಪದಗಳನ್ನು, ಆವರಣ ಚಿಹ್ನೆ, ಸಂಖ್ಯೆ ಮತ್ತು ಅಲ್ಪವಿರಾಮ ಚಿಹ್ನೆಯನ್ನು ಬಿಟ್ಟುಬಿಡತಕ್ಕದ್ದು; ಮತ್ತು

(iii) (4)ನೇ ಉಪಪ್ರಕರಣದಲ್ಲಿ, "ರಾಜ್ಯ ಸರ್ಕಾರವು ಅನುಮೋದಿಸಿದ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

# ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
## (ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರದ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013ನ್ನು (2013ರ ಕರ್ನಾಟಕ ಅಧಿನಿಯಮ 37),-

(i) ಕರ್ನಾಟಕ ವಿಧಾನಸಭಾ ಸದಸ್ಯರನ್ನು ಒಳಗೊಂಡಂತೆ, ರಾಜ್ಯ ಸರ್ಕಾರವು ಎರಡಕ್ಕಿಂತ ಹೆಚ್ಚಿಲ್ಲದಂತೆ, ಕರ್ನಾಟಕ ರಾಜ್ಯ ವಿಧಾನಮಂಡಲದ ಸದಸ್ಯರುಗಳನ್ನು ಪ್ರಾಧಿಕಾರದ ಸದಸ್ಯರುಗಳನ್ನಾಗಿ ನಾಮನಿರ್ದೇಶಿಸುವುದಕ್ಕಾಗಿ; ಮತ್ತು

(ii) ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರದ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಪ್ರಾಧಿಕಾರಕ್ಕೆ ಹೆಚ್ಚಿನ ಅಧಿಕಾರಗಳನ್ನು ಕಲ್ಪಿಸುವುದಕ್ಕಾಗಿ;

– ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಮನೋಹರ್ ಹೆಚ್.ತಹಶೀಲ್ದಾರ್**
ಅಬಕಾರಿ ಹಾಗೂ ಮುಜರಾಯಿ ಸಚಿವರು.

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

**ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013ರ (2013ರ ಕರ್ನಾಟಕ ಅಧಿನಿಯಮ, 37) ಉದ್ಧೃತ ಭಾಗ**

**xx xx xx**

**3. ಪ್ರಾಧಿಕಾರದ ರಚನೆ.**- (1) **xx xx xx**

(4) **xx xx xx**

(ಇ) ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರವನ್ನು ಭಾಗಶಃ ಅಥವಾ ಪೂರ್ಣವಾಗಿ ಪ್ರತಿನಿಧಿಸುವ ಹಾಗೂ ಅದರ ಎಲ್ಲೆಗಳೊಳಗೆ ತಮ್ಮ ಚುನಾವಣಾ ಕ್ಷೇತ್ರವನ್ನು ಹೊಂದಿರುವ ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನಮಂಡಲದ ಸದಸ್ಯರು;

**xx xx xx**

**19. ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು, ಅದರ ಅನುಮೋದನೆ ಹಾಗೂ ಅದನ್ನು ಕಾರ್ಯಗತಗೊಳಿಸುವುದು.**- (1) **xx xx xx**

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಸಿದ್ಧಪಡಿಸಲಾದ ಅಭಿವೃದ್ಧಿ ಯೋಜನೆಯನ್ನು ಕಾರ್ಯದರ್ಶಿಯು ಅನುಮೋದನೆಗಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು. ರಾಜ್ಯ ಸರ್ಕಾರವು, ಮಾರ್ಪಾಟುಗಳ ಸಹಿತವಾಗಿ ಅಥವಾ ಯಾವುವೇ ಮಾರ್ಪಾಟುಗಳಿಲ್ಲದೆ ಯೋಜನೆಯನ್ನು ಅನುಮೋದಿಸಬಹುದು.

(3) (2)ನೇ ಉಪ-ಪ್ರಕರಣದ ಅಡಿಯಲ್ಲಿ ಅಭಿವೃದ್ಧಿ ಯೋಜನೆಯನ್ನು ಅನುಮೋದಿಸಿದ ತರುವಾಯ, ರಾಜ್ಯ ಸರ್ಕಾರವು, ಪ್ರಾಧಿಕಾರದ ಶಿಫಾರಸುಗಳ ಮೇಲೆ ಕಾಲ ಕಾಲಕ್ಕೆ ತಾನು ಅವಶ್ಯಕವೆಂದು ಭಾವಿಸುವಂಥ ಮಾರ್ಪಾಟುಗಳನ್ನು ಯೋಜನೆಯಲ್ಲಿ ಮಾಡಬಹುದು.

(4) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ (2000ರ ಕರ್ನಾಟಕ ಅಧಿನಿಯಮ 29) ಉಪಬಂಧಗಳಿಗೆ ಅನುಸಾರವಾಗಿ, ರಾಜ್ಯ ಸರ್ಕಾರವು ಅನುಮೋದಿಸಿದ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತ ಗೊಳಿಸುವುದಕ್ಕಾಗಿ ಕಾಮಗಾರಿಗಳನ್ನು ಕೈಗೊಳ್ಳುವ ಮತ್ತು ವೆಚ್ಚವನ್ನು ಮಾಡುವ ಅಧಿಕಾರವನ್ನು ಪ್ರಾಧಿಕಾರವು ಹೊಂದಿರತಕ್ಕದ್ದು.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು. ಪಿ7, ಕಾಸೂ . 200-ಪ್ರತಿಗಳು 26ನೇ ಮಾರ್ಚ್, 2016

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**NINTH SESSION**

# *SRI MALAI MAHADESWARASWAMY KSHETHRA DEVELOPMENT AUTHORITY (AMENDMENT) BILL, 2016*

**(L.A. Bill No. 07 of 2016)**

A Bill further to amend Sri Malai Mahadeshwaraswamy Kshetra Development Authority Act, 2013.

Whereas it is expedient further to amend Sri Malai Mahadeshwaraswamy Kshetra Development Authority Act, 2013 (Karnataka Act 37 of 2013) for the purposes hereinafter appearing;

Be it enacted by the Karnataka State Legislature in the Sixty-seventh year of the Republic of India as follows:-

***1. Short title and commencement.***- (1) This Act may be called Sri Malai Mahadeshwaraswamy Kshetra Development Authority (Amendment) Act, 2016.

(2) It shall come into force at once.

***2. Amendment of section 3.***- In Sri Malai Mahadeshwaraswamy Kshetra Development Authority Act, 2013 (Karnataka Act 37 of 2013), (hereinafter referred to as the Principal Act), in section 3, in sub-section (4), in clause (e) for the words "the members of the State Legislature" the words "not more than two members of the Karnataka State Legislature nominated by the State Government including Member of the Karnataka Legislative Assembly" shall be substituted.

***3. Amendment of section 19.***- In the Principal Act , in section 19,-

(i) in sub-section (2), the words "the State Government may approve the plan with or without any modifications" shall be omitted;

(ii) in sub-section (3), the words and punctuation mark "After approval of the development plan under sub-section(2)," shall be omitted; and

(iii) in sub-section (4), the words "approved by the State Government" shall be omitted.

## *STATEMENT OF OBJECTS AND REASONS*

It is considered necessary to amend the Sri Malai Mahadeshwaraswamy Kshetra Development Authority Act, 2013 (Karnataka Act 37 of 2013) to,-

(i) nominate not more than two State Legislature Members including the member of the Karnataka Legislative Assembly as members of the Authority and

(ii) provide for more powers to the Authority in executing the development plans of Sri Malai Mahadeshwaraswamy Kshetra.

Hence, the Bill.

## FINANCIAL MEMORANDUM

There is no additional expenditure involved in the proposed legislative measure.

**MANOHAR H. TAHASHILDAR**
Minister for Excise and Muzarai

**S. MURTHY**
Secretary (I/C)
Karnataka Legislative Assembly

***ANNEXURE***

**EXTRACT FROM SRI MALAI MAHADESHWARASWAMY KSHETRA DEVELOPMENT AUTHORITY ACT, 2013 (KARNATAKA ACT 37 OF 2013)**

**XX XX XX**

**3. Constitution of the Authority.-xx xx**

(e) the Members of Parliament and the Members of the State Legislature representing a part or whole of the Sri Malai Mahadeshwaraswamy Kshethra, whose electoral constituencies lie within the limits of it;

**XX XX XX**

**19. Preparation of developmental plan, its approval and execution.- XX XX XX**

(2) The development plan prepared under sub-section (1) shall be forwarded by the Secretary to the State Government for information The State Government may approve the plan with or without any modifications.

**XX XX XX**

(3) After approval of the development plan under sub-section (2), the State Government may, on the recommendations of the Authority make such modifications to the plan, as it deems necessary, from time to time.

**XX XX XX**

(4) The Authority shall have power to undertake works and incur expenditure for execution of development plans approved by the State Government in accordance with the provisions of the Karnataka Transparency in Public Procurement Act, 1999 (Karnataka Act 29 of 2000).

**XX XX XX**

Government Press, Vikasa Soudha, Bengaluru, P7, W.D., Copies 1020, 4th March, 2016